ಓ ಎಸ್ ನಂ.45/2024
ಪಿ.ಡಬ್ಲ್ಯೂ-1 ದೇವರಾಜ ಎಂ ತಂದೆ ರಾಮಪ್ಪ

**(ಇಂದು ದಿನಾಂಕಃ 19-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಪಿ ಬಿ ಪಿ ವಕೀಲರಿಂದ.

ನಾನು ಮೂಲತ: ಚಿಕ್ಕಮಂಗಳೂರು ಊರಿನವನು ಎಂದರೆ ಸರಿ. ನಾನು ಬೆಂಗಳೂರಿನ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಸಾಫ್ಟವೇರ್ ಡೆವಲಪರ್ ಕೆಲಸವನ್ನು ಮಾಡುತ್ತೇನೆ. ನಾನು ಕೋರ್ ಫ್ಲೆಕ್ಸ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಇ ಅಂಡ ಸಿ ಇಂಜೀನಿಯರಿಂಗ್ ಓದಿರುತ್ತೇನೆ. ನನಗೆ ೧ ವರ್ಷಕ್ಕೆ ಮೂರು ಲಕ್ಷ ಮೂವತ್ತಾರು ಸಾವಿರ ರೂಪಾಯಿ ಸಂಬಳ ಇರುತ್ತದೆ. ನಾನು ಈಗ ಬೆಂಗಳೂರಿನಲ್ಲಿಯೇ ವಾಸ ಇರುತ್ತೇನೆ.

೨. ಪ್ರತಿವಾದಿ ಅಫಜಲಪೂರ ತಾಲೂಕಿನ ಕುಡಿಗನೂರ ಗ್ರಾಮದವರು ಎಂದರೆ ಸರಿ. ಪ್ರತಿವಾದಿ ತಮ್ಮ ಊರಿನಲ್ಲಿಯೇ ಒಕ್ಕಲುತನ ಮಾಡಿಕೊಂಡು ಇರುತ್ತಾರೆ ಎಂದರೆ ಸರಿ. ಸಾಕ್ಷಿಯು ಮೊದಲು ಅವರು ಬೆಂಗಳೂರಿನಲ್ಲಿ ಇದ್ದರು, ಆಗ ನನಗೆ ಪರಿಚಯ ಆಗಿರುತ್ತಾರೆ ಎನ್ನುತ್ತಾರೆ. ನಾನು ಕುಡಿಗನೂರ ಗ್ರಾಮಕ್ಕೆ ಹೋಗಿದ್ದೆ. ಸದರಿ ಗ್ರಾಮದಲ್ಲಿ ನನಗೆ ೨ ಜನ ಪರಿಚಯ ಇರುತ್ತಾರೆ. ಪ್ರತಿವಾದಿ ಮತ್ತು ಅವರ ಅಣ್ಣನಾದ ಶಿವರಾಜ ಬಿರಾದಾರರವರು ನನಗೆ ಪರಿಚಯವಿರುತ್ತಾರೆ. ಅವರನ್ನು ಬಿಟ್ಟು ಕುಡಿಗನೂರ ಗ್ರಾಮದಲ್ಲಿ ನನಗೆ ಯಾರು ಪರಿಚಯ ಇರುವುದಿಲ್ಲ.

೩. ದಾವಾ ಆಸ್ತಿಯ ಸರ್ವೆ ನಂಬರ ೪೬/೮ ಇರುತ್ತದೆ. ಸಾಕ್ಷಿಯು ಅದು ಮೊದಲು ೪೬/೫ ಎಂದು ಇತ್ತು ಎನ್ನುತ್ತಾರೆ. ದಾವಾ ಆಸ್ತಿಯು ೪ ಎಕರೆ ಇರುತ್ತದೆ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ಶಿವಾನಂದ ಮಹಾಲಿಂಗಪ್ಪ ಪಾಟೀಲ್ ರವರ ಜಮೀನು ಇರುತ್ತದೆ, ಪಶ್ಚಿಮಕ್ಕೆ ಮಹಾಲಿಂಗಪ್ಪ ಕರಟಗಿರವರ ಜಮೀನು ಇರುತ್ತದೆ, ಉತ್ತರಕ್ಕೆ ಪ್ರತಿವಾದಿಯ ತಂದೆ ರೇವಣಸಿದ್ದರವರ ಜಮೀನು ಇರುತ್ತದೆ ಮತ್ತು ದಕ್ಷಿಣಕ್ಕೆ ಶಾಮರಾವ್ ಬಿರಾದಾರರವರ ಜಮೀನು ಇರುತ್ತದೆ.

೪. ದಾವಾ ಆಸ್ತಿ ಪ್ರತಿವಾದಿಗೆ ಅವರ ತಂದೆಯಿಂದ ಬಂದಿರುತ್ತದೆ. ಅದು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಇದೆ ಎಂದರೆ ಸರಿ. ಪ್ರತಿವಾದಿಗೆ ೩ ಜನ ಸಹೋದರಿಯರು ಇರುತ್ತಾರೆ. ಪ್ರತಿವಾದಿಯ ತಂದೆ-ತಾಯಿ ಕೂಡಾ ಜೀವಿತಾ ಇರುತ್ತಾರೆ. ಪ್ರತಿವಾದಿಯ ಸಹೋದರಿಯರು ನಾನು ವ್ಯವಹಾರದ ಸಲುವಾಗಿ ಬಂದಾಗ ಪರಿಚಯ ಆಗಿರುತ್ತಾರೆ. ಪ್ರತಿವಾದಿ ಬೆಂಗಳೂರು ಬಿಟ್ಟುಬಂದು ೪-೫ ವರ್ಷಗಳಾಗಿವೆ ಎಂದರೆ ಸರಿ. ೪-೫ ವರ್ಷಗಳಿಂದ ನನಗೂ ಮತ್ತು ಪ್ರತಿವಾದಿಗೂ ಸಂಪರ್ಕ ಇಲ್ಲ ಎಂದರೆ ಸರಿಯಲ್ಲ. ಸದರಿ ಸಂಪರ್ಕ ಫೋನ್ ಮೂಲಕ ಮತ್ತು ಪ್ರತಿವಾದಿ ಬೆಂಗಳೂರಿಗೆ ಬಂದು ಭೇಟಿ ನೀಡಿದ ಮೇರೆಗೆ ಇರುತ್ತದೆ. ಕುಡಿಗನೂರ ಗ್ರಾಮದಲ್ಲಿ ಎಕರೆಗೆ ಹನ್ನೆರಡರಿಂದ ಹದಿಮೂರು ಲಕ್ಷ ರೂಪಾಯಿ ಬೆಲೆ ಜಮೀನಿಗೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

೫. ನನ್ನ ಮತ್ತು ಪ್ರತಿವಾದಿಯ ನಡುವೆ ವ್ಯವಹಾರ ಆಗುವಾಗ ಕುಡಿಗನೂರಿನ ಈರಣ್ಣ ಉಣಸಗಿ, ಶರಣಬಸಪ್ಪ ಅಳ್ಳಗಿ, ಭಗವಂತರಾಯ್ ಗೋಳೆಗಾಂವ್, ಸಿದ್ದಣ್ಣ ಬಿರಾದಾರ ಇದ್ದರು. ಬೆಂಗಳೂರಿನ ನನ್ನ ಗೆಳೆಯ ಆನಂದ ಕೂಡಾ ಇದ್ದರು. ಪ್ರತಿವಾದಿ ಮತ್ತು ಅವರ

ತಂದೆ ರೇವಣಸಿದ್ದ ಕೂಡಾ ಇದ್ದರು. ಪ್ರತಿವಾದಿಯ ಅಕ್ಕ-ತಂಗಿಯರು ಆ ಸಮಯದಲ್ಲಿ ಇರಲಿಲ್ಲ ಎಂದರೆ ಸರಿ. ಬಾಂಡ್ ಪೇಪರನ್ನು ಪ್ರತಿವಾದಿಯ ಮನೆಯಲ್ಲಿಯೇ ಬರೆಯಲಾಗಿದೆ. ನಾನು ಹೇಳಿದ ಎಲ್ಲರೂ ಅದಕ್ಕೆ ಸಹಿ ಮಾಡಿರುತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹದಿನೈದು ಲಕ್ಷ ರೂಪಾಯಿ ಹಣವನ್ನು ಮುಂಗಡವಾಗಿ ನಗದಾಗಿ ನೀಡಿರುತ್ತೇನೆ. ಪ್ರತಿವಾದಿಯ ಅಕ್ಕ-ತಂಗಿಯರನ್ನು ಯಾಕೆ ವ್ಯವಹಾರಕ್ಕೆ ಕರೆದಿಲ್ಲ ಎಂದರೆ ಸಾಕ್ಷಿಯು ನೀವು ವ್ಯವಹಾರ ಮಾಡಿಕೊಳ್ಳಿ ನಾವು ಖರೀದಿ ಪತ್ರ ನೋಂದಣಿ ಸಮಯದಲ್ಲಿ ಬರುತ್ತೇವೆ ಎಂದು ಅವರು ಹೇಳಿದ್ದರು ಎನ್ನುತ್ತಾರೆ. ಸದರಿ ವಿಚಾರವನ್ನು ದಾವೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವುದಿಲ್ಲ. ಪ್ರತಿವಾದಿಯ ತಂದೆ ರೇವಣಸಿದ್ದಪ್ಪರವರು ತಮ್ಮ ಹೆಸರು ಬರೆದಿರುತ್ತಾರೆ ಅವರ ಸಹಿ ಇಲ್ಲ ಎಂದರೆ ಸಾಕ್ಷಿಯು ಅವರು ತಮ್ಮ ಹೆಸರು ಬರೆದೆ ತಮ್ಮ ಸಹಿ ಮಾಡಿರುತ್ತಾರೆ ಎನ್ನುತ್ತಾರೆ.

೬. ಬಾಂಡ್ ಬರೆದ ದಿನ ಯಾವ ವಾರ ಇತ್ತು ಎಂದು ಹೇಳಲು ನನಗೆ ನೆನಪಿಲ್ಲ. ಸುಮಾರು ಮಧ್ಯಾಹ್ನ ೧ ರಿಂದ ೨ ಗಂಟೆ ಸಮಯದಲ್ಲಿ ಸದರಿ ವ್ಯವಹಾರ ಆಗಿರುತ್ತದೆ. ನೋಟರಿಯನ್ನು ಯಾವ ದಿನ ಮಾಡಿಸಿರುತ್ತೀರಿ ಎಂದರೆ ಸಾಕ್ಷಿಯು ನೋಟರಿ ಮಾಡಿಸಿರುವುದಿಲ್ಲ ಎನ್ನುತ್ತಾರೆ. ನನ್ನ ವಾದಪತ್ರದಲ್ಲಿ ನೋಟರೈಸ್ಡ ಕರಾರು ಪತ್ರ ಆದ ಕುರಿತು ನಮೂದು ಮಾಡಲಾಗಿದೆ ಎಂದರೆ ಸರಿ. ನಾನು ಹಾಜರುಪಡಿಸಿದ ನಿಪಿ-೧ ನೋಟರಿ ಮಾಡಿಸಿದ ದಾಖಲೆ ಅಲ್ಲ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿ ನಡುವೆ ನಾನು ಹೇಳಿದಂತೆ ಯಾವುದೇ ವ್ಯವಹಾರ ಆಗಿಲ್ಲ ಮತ್ತು ನಾನು ಪ್ರತಿವಾದಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ.

೭. ನಾನು ಆದಾಯ ತೆರಿಗೆಯನ್ನು ತುಂಬುತ್ತೇನೆ. ನಾನು ೧೫ ಲಕ್ಷ ರೂಪಾಯಿ ಹಣವನ್ನು ನನ್ನ ಊರಿನಲ್ಲಿರುವ ಕೃಷಿ ಆದಾಯದಿಂದ ಮತ್ತು ನನ್ನ ಗೆಳೆಯರ ಹತ್ತಿರ ಸಾಲ ಪಡೆದು, ಪ್ರತಿವಾದಿಗೆ ನೀಡಿರುತ್ತೇನೆ. ಸದರಿ ವಿಚಾರವನ್ನು ನನ್ನ ದಾವೆಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ನಾನು ಬರೆಸಿರುವುದಿಲ್ಲ. ೧೦ ಲಕ್ಷ ಮೇಲ್ಪಟ್ಟು ನಗದು ವ್ಯವಹಾರ ಮಾಡುವುದು ಕಾನೂನುಬಾಹಿರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಹಣದ ವ್ಯವಹಾರ ೪ ಗೋಡೆ ಮದ್ಯ ಮನೆಯಲ್ಲಿ ಆಗಿರುತ್ತದೆ ಎಂದರೆ ಸರಿ. ನಾನು ಪ್ರತಿವಾದಿ ನನ್ನ ಗೆಳೆಯನಾಗಿರುವುದರಿಂದ ಅವರಿಗೆ ಮೋಸ ಮಾಡಿ, ನಿಪಿ-೧ ರ ದಾಖಲೆಯನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

೮. ಪ್ರತಿವಾದಿಯ ಮನೆಯವರ ಯಾವುದೇ ಸಮ್ಮತಿ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಅವರ ತಂದೆಯೂ ಕೂಡಾ ಸಹಿ ಮಾಡಿರುತ್ತಾರೆ ಎನ್ನುತ್ತಾರೆ. ಇದೆ ನ್ಯಾಯಾಲಯದಲ್ಲಿ ಪ್ರತಿವಾದಿಯ ಸಹೋದರಿಯರು ಪಾಲು ಕೇಳಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ನನ್ನನ್ನೂ ಕೂಡಾ ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸರಿ. ದಾವಾ ಆಸ್ತಿ ಹಿರಿಯರಿಂದ ಬಂದಿದೆ ಎಂದು ನಾನು ಸದರಿ ದಾವೆಯ ಪ್ರತಿವಾದ ಪತ್ರದಲ್ಲಿ ಒಪ್ಪಿಕೊಂಡಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಇದ್ದ ವಿಚಾರ ಗೊತ್ತಿದ್ದರೂ ಸಹ ನಾನು ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಒಂದು ಸುಳ್ಳು ದಾಖಲೆಯನ್ನು ಸೃಷ್ಟಿಸಿಕೊಂಡು ಅದರ ಮೇಲೆ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.